**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ</u>**

**<u>ಸಿ.ಸಿ. ನಂ. 8325/2022</u>**

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ನರೋಣಾ ಪೋಲಿಸ್ ಠಾಣೆ
ವಿರುದ್ಧ

ಆರೋಪಿತರು 1. ವಿಷ್ಣು ತಂದೆ ಮಾನು ಚವಾಣ,
ವಯಃ 28ವರ್ಷ, ಉಃ ಚಾಲಕ,
ಸಾಃ ಕುಶಪ್ಪನ ತಾಂಡಾ ನರೋಣಾ ತಾಃ ಆಳಂದ,
ಜಿಃ ಕಲಬುರಗಿ.

**<u>ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ. ಕೇಳಿದ್ದೇನೆ.

ಪ್ರಶ್ನೆ 2. **ಸಿ.ಡಬ್ಲೂ. 1. ಪಿ.ಡಬ್ಲೂ. 1. ನಾಗಪ್ಪ ಗಂಡ/ತಂದೆ ಭೋಗಪ್ಪ,** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-2 ರಿಂದ 6, 10 ರಿಂದ 12 ರವರ ಪರಿಚಯ ಇರುತ್ತದೆ. ಚಾಸಾ-7 ರವರ ಪರಿಚಯ ಇರುವುದಿಲ್ಲ. ಚಾಸಾ-9 ನನ್ನ ಹೆಂಡತಿ, ಮೃತ ಭಗವಂತ ನನ್ನ ಮಗ. ನನಗೆ ಕಾಲು ನೋವು ಇದ್ದ ಕಾರಣ ನನ್ನ ಪರವಾಗಿ ನನ್ನ ಮಗ ನೀರು ಬೀಡಲು ಕುಶಪ್ಪ ತಾಂಡಾಕ್ಕೆ ಹೋಗುತ್ತಿದ್ದನು. ನನ್ನ ಮಗ ಮನೆಯಿಂದ ಹೊರಟಾಗ 6.45 ಆಗಿರುತ್ತದೆ. ಮುಂದೆ ಚಾಸಾ-6 ರವರು ನನಗೆ ಕರೆ ಮಾಡಿ ನಿಮ್ಮ ಮಗನಿಗೆ ಅಪಘಾತವಾಗಿ ತೀವ್ರ ರಕ್ತಸ್ರಾವವಾಗಿ ಸ್ಥಳದಲಿಯೇ ಮೃತಪಟರುತ್ತಾರೆ ಎಂದು ತಿಳಿಸಿದರು. ಚಾಸಾ-10 ರಿಂದ 12 ರವರು ಹಾಗೂ ನಾನು ನನ್ನ ಹೆಂಡತಿ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಮಗ ನೆಲದ ಮೇಲೆ ಬಿದ್ದು ತೀವ್ರ ರಕ್ತಸ್ರಾವ ಆಗಿತ್ತು. ಒಂದು ಕ್ರೂಸರ ರಾಂಗ ಸೈಡನಿಂದ ಅತಿ ವೇಗವಾಗಿ ಬಂದು ನನ್ನ ಮಗ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದ ಕಾರ ಅಪಘಾತವಾಗಿದ್ದು ಅಪಘಾತವಾದ ನಂತರ ವಾಹನ ಚಾಲಕ ಅಲ್ಲಿಂದ ಕೂರಸರ ಬಿಟ್ಟು ಓಡಿ ಹೋಗಿರುತ್ತಾನೆ ಎಂದು ಹೇಳಿದರು. ನಾವು ನಂತರ ಪೋಲಿಸ ಠಾಣೆಗೆ ಹೋಗಿ ದೂರು ನೀಡಿದೇವು. ಪೋಲಿಸರು ಬಂದು ಮೃತ ದೇಹವನ್ನು ಆಸ್ಪತ್ರೆಗೆ ಕಳುಹಿಸಿಕೊಟಿರುತ್ತಾರೆ. ಸಾಕ್ಷಿಗೆ ಈಗ ಅವರು ನೀಡಿದ ದೂರನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತೀರಿ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೇ 3- **ಸಿ.ಡಬ್ಲ್ಯೂ.4. ಪಿ. ಡಬ್ಲ್ಯೂ. 2, ಮಲಕಪ್ಪ ತಂದೆ ಶಿವಶರಣಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-1, 5 ರವರ ಪರಿಚಯ ಇರುತ್ತದೆ. ದಿ.29.05.2022 ರಂದು ಬೋದನ ರಸ್ತೆ ಪೂಲ ಹತ್ತಿರ ಒಂದು ಜೀಪ ಹಾಗೂ ಹಿರೋಹೋಂಡಾ ಅಪಘಾತವಾಗಿತ್ತು. ನಾವು ಅಪಘಾತವನ್ನು ನೋಡಿದೇವು. ನನ್ನ ಎದುರು ಪಂಚನಾಮೆ ಮಾಡಿದರು. ಕ್ರೂಸರ ಹಾಗೂ ದ್ವಿಚಕ್ರವಾಹನವನ್ನು ಜಪ್ತಿಪಡಿಸಿಕೊಂಡರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿ ಅದರಲ್ಲಿರಮ ಸಹಿ ಗುರುತಿಸಿದ್ದು ಪಂಚನೆಮಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 4- **ಸಿ.ಡಬ್ಲ್ಯೂ.3, ಪಿ. ಡಬ್ಲ್ಯೂ.3 ಚನ್ನವೀರಯ್ಯ ತಂದೆ ಶಿವಾಶಂಕರಯ್ಯ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-1, 2 ಪರಿಚಯ ಇರುತ್ತಾರೆ. ನಾನು ಶವ ಪಂಚನೆಮ ಮಾಡುವಾಗ ಸಹಿ ಮಾಡಿದೇನು. ಅಪಘಾತವಾಗಿ ಮೃತನಿಗೆ ತಲೆಗೆ ಪೆಟ್ಟಾಗಿತ್ತು. ಸಾಕ್ಷಿಗೆ ಈಗ ಶವ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿ ಗುರತಿಸಿದ್ದು, ಶವ ಪಂಚನಾಮೆಯನ್ನು ನಿಪಿ-3 ಹಾಗೂ ಅದರ ಮೇಲೆ ಇರುವ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 5- **ಸಿ.ಡಬ್ಲ್ಯೂ.5, ಪಿ. ಡಬ್ಲ್ಯೂ. 4 ರವರು ಆದ ಭೀಮಾಶಂಕರ ತಂದೆ ಅಂಬಾರಾಯ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 4, 6, 8 ರಿಂದ 12 ರವರ ಪರಿಚಯ ಇರುತ್ತದೆ. ಚಾಸಾ-7 ರವರ ಪರಿಚಯ ಇರುವುದಿಲ್ಲ. ಆರ್.ಟಿ.ಓ. ಅಧಿಕಾರಿ ಹಾಗೂ ಪೋಲಿಸರು ಬಂದು ಪಂಚನಾಮೆ ಮಾಡುವಾಗ ನಾನು ಸಹಿ ಮಾಡಿರುತ್ತೇನೆ. ಅಪಘಾತ ಆದಾಗ ಪೋಲಿಸರು ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು. ಆಗ ನಾನು ಹೋಗಿದ್ದೇನು. ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸಿ ಅದರಲ್ಲಿರುವ ಅವರ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 6- **ಸಿ.ಡಬ್ಲ್ಯೂ.7, ಪಿ. ಡಬ್ಲ್ಯೂ. 5 ರವರು ಆದ ಸವಿತಾ ತಂದೆ/ಗಂಡ ನಾತು ರಾಠೋಡ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-8 ರವರ ಪರಿಚಯ ಇರುತ್ತದೆ.

ಮೃತ ಭಗವಂತರವರ ಪರಿಚಯ ಇರುವುದಿಲ್ಲ. ನಾವು ರೇಷನ ತುಂಬಲು ಆರೋಪಿಯ ವಾಹನದಲ್ಲಿ ಹೋಗುತ್ತಿದ್ದೇವು ಆಗ ಆರೋಪಿಯ ವಾಹನ ಮೂರು ಗುಂಡಿಗಳು ಇದ್ದ ಕಾರಣ ನಿಧಾನವಾಗಿ ಹೋಗುತ್ತಿತ್ತು ಅದರೆ ಮುಂದೆ ಇದ್ದ ದ್ವಿಚಕ್ರ ವಾಹನ ಅತಿ ವೇಗವಾಗಿ ಬರುತ್ತಿತ್ತು. ಅಪಘಾತ ಆಗಿರುತ್ತದೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 7- **ಸಿ.ಡಬ್ಲೂ.8, ಪಿ. ಡಬ್ಲೂ. 6 ರವರು ಆದ ಸುಮಿತ್ರ ತಂದೆ/ಗಂಡ ಪ್ರಭು ಚವಾಣ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-7 ರವರ ಪರಿಚಯ ಇರುತ್ತದೆ. ಉಳಿದವರ ಪರಿಚಯ ಇರುವುದಿಲ್ಲ. ಮೃತ ಭಗವಂತರವರ ಪರಿಚಯ ಇರುವುದಿಲ್ಲ. ನಾವು ರೇಷನ ತುಂಬಲು ಆರೋಪಿಯ ವಾಹನದಲ್ಲಿ ಹೋಗುತ್ತಿದ್ದೇವು ಎದುರು ಬಂದ ವಾಹನ ಅತಿ ವೇಗವಾಗಿ ಬಂದು ಆರೋಪಿಯ ವಾಹನಕ್ಕೆ ಗುದ್ದಿರುತ್ತಾನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 8- **ಸಿ.ಡಬ್ಲೂ.9, ಪಿ. ಡಬ್ಲೂ. 7 ರವರು ಆದ ಅನಸೂಬಾಯಿ ತಂದೆ/ಗಂಡ ನಾಗಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ನನ್ನ ಮಗನಿಗೆ ಅಪಘಾತ ಪಡಿಸಿದವನು ಅವನೇ. ಚಾಸಾ-1 ನನ್ನ ಗಂಡ. ಚಾಸಡಾ-2 ರಿಂದ 8, 10, 11 ರವರ ಪರಿಚಯ ಇರುತ್ತದೆ. ಮೃತ ಭಗವಂತ ನನ್ನ ಮಗ. ನನ್ನ ಗಂಡನಿಗೆ ಹುಷಾರಿಲ್ಲದ ಕಾರಣ ತಾಂಡಾಗೆ ನೀರು ಬಿಡಲು ನನ್ನ ಮಗ ಹೋಗಿದ್ದನು. ಹೋದಾಗ ಅಪಘಾತ ಆಗಿರುತ್ತದೆ. ನಮಗೆ ವಿಷಯ ತಿಳಿದ ನಂತರ ನಾವು ಸ್ಥಳಕ್ಕೆ ಹೋದಾಗ ವಾಹನ ಬಿಟ್ಟು ಓಡಿ ಹೋಗಿದ್ದನು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 9- **ಸಿ.ಡಬ್ಲೂ.10, ಪಿ. ಡಬ್ಲೂ. 8 ರವರು ಆದ ದತ್ತು ತಂದೆ/ಗಂಡ ಕ್ಷೇಮಲಿಂಗ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸಾ-1 ಅಣ್ಣ ತಮ್ಮಕಿ. ಚಾಸಾ-9 ನನ್ನ ಕಾಕಿ. ಚಾಸಾ-2 ರಿಂದ 8, 11, 12 ರವರ ಪರಿಚಯ ಇರುತ್ತದೆ. ಮೃತ ಭಗವಂತ ನನ್ನ ಸಂಬಂಧಿಕ. ದಿ29.05.2022 ರಂದು ನಾನು ಬೆಳಗ್ಗೆ ಹೊಲದಲ್ಲಿ ನೀರು ಬಿಡುತ್ತಿದ್ದು 6.45 ಗಂಟೆಗೆ ಪಕ್ಕದಲ್ಲಿಯೇ ನಮ್ಮ ಕಾಕಾ ಕಾಕಿಯ ಮನೆ ಇದ್ದು ಅವರು ಅಳುವ ಶಬ್ದ ಕೇಳಿ ನಾನು ಹೋಗಿ ಕೇಳಿದಾಗ ಚಾಸಾ-6 ರವರು ಕರೆ ಮಾಡಿ ನನ್ನ ಮಗನಿಗೆ ಅಪಘಾತವಾಗಿ ಭೋದನ ಬ್ರಿಡ್ಜ ಮುಂದೆ

ಮೃತಪಟ್ಟಿರುತ್ತಾನೆ ಎಂದು ತಿಳಿಸಿದನು ನಂತರ ನನ್ನನ್ನು ಅವರೊಂದಿಗೆ ಕರೆದುಕೊಂಡು ಹೋದರು. ನಾನು ಅಲ್ಲಿ ಹೋಗಿ ನೋಡುವವರೆಗೂ ಮೃತಪಟ್ಟಿದ್ದರು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 10- **ಸಿ.ಡಬ್ಲೂ.6, ಪಿ. ಡಬ್ಲೂ. 9 ರವರು ಆದ ರಾಜು ಅಲಿಯಾಸ ರಾಜಕುಮಾರ ತಂದೆ ಭೀಮಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ5, 10 ರಿಂದ 12 ಪರಿಚಯ ಇರುತ್ತಾರೆ. ಚಾಸಾ-7, 8, 9 ರವರ ಪರಿಚಯ ಇರುವುದಿಲ್ಲ. ಮೃತ ಭಗವಂತರವರ ಪರಿಚಯ ಇರುವುದಿಲ್ಲ ಆದರೆ ಅವರನ್ನು ನೋಡಿರುತ್ತೇನೆ. 2022 ರಲ್ಲಿ ಕ್ರೂಸರ ಮತ್ತು ದ್ವಿಚಕ್ರ ವಾಹನದ ಮಧ್ಯ ಅಪಘಾತ ಆಗಿ ಭಗಂವತ ಅನುವವರು ತೀರಿಕೊಂಡಿದ್ದು ನಂತರ ಅಲ್ಲಿ ಜನ ಸೇರಿದ್ದರು ನಾನು ಸಹ ಅಲ್ಲಿ ನಿಂತುಕೊಂಡಿದ್ದೆ ನಂತರ ರಸ್ತೆಯ ಮೇಲೆ ಬಿದ್ದಿದ್ದ ಮೃತ ದೇಹವನ್ನು ವಾಹನಕ್ಕೆ ಹಾಕಿರುತ್ತಾರೆ. ನಂತರ ನಾನು ಅಲ್ಲಿಂದ ಹೋಗಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 11- **ಸಿ.ಡಬ್ಲೂ.11, ಪಿ. ಡಬ್ಲೂ. 10, ರವರು ಆದ ಆಕಾಶ ತಂದೆ ಕ್ಷೇಮಲಿಂಗ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿ ಪರಿಚಯ ಇರುತ್ತದೆ. ಚಾಸ-1 ರಿಂದ 9,12,13 ರವರ ಪರಿಚಯ ಇರುತ್ತದೆ. ಬೆಳಿಗ್ಗೆ ಢಾಬಾದ ಹತ್ತಿರ ಚಾಸ-10,12 ರವರ ಜೊತೆ ಮಾತನಾಡುತ್ತಾ ನಿಂತಾಗ ಚಾಸ-1 ರವರು ಬಂದು ಭಗವಂತರಿಗೆ ಅಪಘಾತವಾಗಿದ್ದು ಎಂದು ತಿಳಿಸಿದ್ದು ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಭಗವಂತರವರು ಮೃತಪಟ್ಟಿದ್ದು ಅಪಘಾತ ಸ್ಥಳದಲ್ಲಿ ರಕ್ತ ಚೆಲ್ಲಿರುತ್ತದೆ. ಅಲ್ಲಿರುವ ಕ್ರೂಸರ ಬಳಿ ಚಾಲಕ ನೋಡಿದಾಗ ಯಾರು ಇರಲಿಲ್ಲ ನಂತರ ನಾನು ಅಲ್ಲಿಂದ ಹೊರಟಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 12- **ಸಿ.ಡಬ್ಲೂ.18, ಪಿ. ಡಬ್ಲೂ. 11, ರವರು ಆದ ವಾತ್ಸಲ್ಯ ತಂದೆ/ಗಂಡ ಸಂಗಣ್ಣ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿ.24.09.2021 ರಿಂದ 30.07.2023 ರ ವರೆಗೆ ನಾನು ನರೋಣಾ ಪೋಲಿಸ ಠಾಣೆಯಲ್ಲಿ ಪಿಎಸಐ ಎಂದು ಕಾರ್ಯನಿರ್ವಹಿಸಿಸಿದ್ದೇನೆ. ದಿ.29.05.2022 ರಂದು ಬೆಳಿಗ್ಗೆ 8.30 ಗಂಟೆಗೆ ಚಾಸ-1 ,ರವರು ಠಾಣೆಗೆ ಹಜಾಜರಾಗಿ ಹೇಳಿಕೆ ಪಿರ್ಯಾದಿಯನ್ನು ನೀಡಿದ್ದು ಅದರ ಆಧಾರದ ಮೇಲೆ ಗುನ್ನಾ ಸಂಖ್ಯೆ 61/2022 ಎಂದು ದಾಖಲಾಸಿಕೊಂಡೆನು ಮತ್ತು ಪ್ರಥಮ

ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೇನು ಅದೇ ದಿನ ನರೋಣಾ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 9.45 ರಿಂದ 10.45 ರವರಗೆ ಮೃತ ಭಗವಂತ ರವರ ಶವ ಪಂಚಾನಮೆಯನ್ನು ಜರುಗಿಸಿ. ದಿ. 29.05.2022 ರಂದು ಚಾಸ-9ರವರ ಹೆಳಿಕೆಯನ್ನು ಪಡೆದುಕೊಂಡು ಮುಂದಿನ ತನಿಖೆಗಾಗಿ ಚಾಸ-19 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 13- **ಸಿ.ಡಬ್ಲೂ.19, ಪಿ. ಡಬ್ಲೂ. 12, ರವರು ಆದ ಮಂಜುನಾಥ ತಂದೆ ನಾರಾಯಣಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಸೆಪ್ಟೆಂಬರ-2020 ರಿಂದ ಜೂನ-2022 ರ ವರೆಗೆ ಸಿಪಿಐ ಎಂದು ಆಳಂದ ಪೋಲಿಸ ಠಾಣೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ದಿ.29.05.2022 ರಂದು ಚಾಸಾ-18 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ಅದೇ ದಿನ ಗುನ್ನಾ ಸ್ಥಳಕ್ಕೆ ಹೋಗಿ ಚಾಸಾ-1 ರವರು ತೋರಿಸಿದ ಗುನ್ನೆ ಸ್ಥಳ ಪಂಚನಾಮೆಯನ್ನು ಚಾಸಾ-2, 3 ರವರ ಸಮಕ್ಷಮ ಮಾಡಿ ಸ್ಥಳದಿಂದ ಒಂದು ಕ್ರೂಸರ ವಾಹನ ಮತ್ತು ಫ್ಯಾಶನ ದ್ವಿಚಕ್ರ ವಾಹನವನ್ನು ಜಪ್ತಿಪಡಿಸಿಕೊಂಡು ಅದೇ ದಿನ ಚಾಸಾ-6 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡು, ಅದೇ ದಿನ ಚಾಸಾ-16, 17 ರವರಿಂದ ವರದಿ ಪಡೆದು ದಿ.20.07.2020 ರಂದು ಇಂಡಿಮನಿಟಿ ಬಾಂಡ ಪಡೆದು ಕ್ರೂಸರ ವಾಹನವನ್ನು ಮಾಲೀಕರಿಗೆ ನೀಡಿದ್ದು, ದಿ.25.07.2020 ರಂದು ಇಂಡಿಮನಿಟಿ ಬಾಂಡ ಪಡೆದು ದ್ವಿಚಕ್ರ ವಾಹನವನ್ನು ಮಾಲೀಕರಿಗೆ ನೀಡಿದ್ದು, ದಿ.06.06.2020 ರಂದು ಆರೋಪಿತನಿಗೆ ದಸ್ತಗೀರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗೆ ಚಾಸಾ-20 ರವರಿಗೆ ನೀಡಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 14- **ಸಿ.ಡಬ್ಲೂ.14, ಪಿ. ಡಬ್ಲೂ. 13, ರವರು ಆದ ಇಕ್ರಮ ಪಾಶಾ ತಂದೆ ಮಹ್ಮಮದ ಆಕ್ಬರ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಡಿಸೆಂಬರ 2018 ರಿಂದ ಇಲ್ಲಿಯವರೆಗೆ ಕಲಬುರಗಿಯಲ್ಲಿ ಹಿರಿಯ ಮೋಟಾರು ವಾಹನ ನೀರಿಕ್ಷಕ ಅಂತಾ ಕಾರ್ಯ ನಿರ್ವಹಿಸುತ್ತಿದ್ದೇನೆ. ದಿಃ 03.06.2022 ರಂದು ಬೆಳಿಗ್ಗೆ 8.15 ಕ್ಕೆ ಸಿ.ಪಿ.ಐ ಆಳಂದರವರ ಕೋರಿಕೆಯ ಮೇರೆಗೆ, ಅದೆ ದಿನ ಮಧ್ಯಾಹ್ನ 2.50 ಗಂಟೆಗೆ ನರೋಣಾ ಪೋಲಿಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಅಪಘಾತಕ್ಕೆ ಒಳಗಾದ ವಾಹನವಾದ ಕೆ.ಎ. 48/ಎಮ್-0521ದ ಎಲ್ ಎಮ್ ವಿ ಓಮಿನಿ ಬಸ್ ಮತ್ತು ಕೆ. ಎ. 32/ಇಸಿ-4466 ವಾಹನವನ್ನು ಪರಿಶೀಲಿಸಲಾಗಿ ಕೆ.ಎ.48/ಎಮ್-0521 ಇದರಲ್ಲಿ ಈ ಕೆಳಗಿನಂತೆ ಕಂಡು ಬಂದಿರುತ್ತದೆ. ಮುಂದಿನ ಭಂಪರ ಜಖಂಗೊಂಡಿತ್ತು, ಎಡಗಡೆಯ ಹೆಡ್ಡ ಲೈಟ್ ಜಖಂಗೊಂಡಿತ್ತು, ಬಲಗಡೆಯ ಮುಂದಿನ

ಬಾಗಿಲು ಗಿಚುಗಳು ಕಂಡು ಬಂದಿದ್ದು, ಬಲಭಾಗದ ಹಿಂದಿನ ಬಾಗಿಲು ಅದರ ಕಿಟಕಿ ಗ್ಲಾಸು ಜಖಂಗೊಂಡಿತ್ತು. ಕೆ. ಎ. 32/ಇಸಿ-4466 ವಾಹನವನ್ನು ಪರಿಶೀಲಿಸಲಾಗಿ ಇದರಲ್ಲಿ ಈ ಕೆಳಗಿನಂತೆ ಕಂಡು ಬಂದಿರುತ್ತದೆ. ಮುಂದಿನ ಚಕ್ರದ ಹಾಗೂ ಅದರ ಮಡ್ಡಗಾರ್ಡ ಜಖಂಗೊಂಡಿತ್ತು ಹಾಗೂ ಮುಂದಿನ ಶಾಖ ಅಬಜಾರ್ಬರ್ಸ ಅಸೆಂಬಲ್ ಜಖಂಗೊಂಡಿತ್ತು. ಮುಂದಿನ ಹೆಡ್‌ಲೈಟ್ ಹಾಗೂ ಇಂಡಿಕೇಟರಗಳು ಜಖಂಗೊಂಡಿತ್ತು ಹಾಗೂ ಮುಂದಿನ ಸೇಫ ಗಾರ್ಡ ಬಲಭಾಲಗದಲ್ಲಿ ನೆಗ್ಗಿತ್ತು, ಸ್ಟೇರಿಂಗ ವೀಲ್ ಹಾಗೂ ಸ್ಪಿಡೋ ಮೀಟರ ಜಖಂಗೊಂಡಿತ್ತು ಇರಡು ಕಡೆಯ ರಿಯರ್ ವಿವ್ಹೋಯ ಕನ್ನಡಿಗಳು ಜಖಂ ಗೊಂಡಿತ್ತು ರಿಯರ್ ಎಡಗಡೆಯ ಹಿಂಬದಿಯ ಇಂಡಿಕೇಟರ್ ಜಖಂಗೊಂಡಿತ್ತು. ವಾಹನ ಸಂಖ್ಯೆ. ಕೆ. ಎ. 32/ಇಸಿ-4466 ವಾಹನವನ್ನು ನಿಂತಲ್ಲೆ ಪರಿಶೀಲನೆ ಮಾಡಲಾಗಿ ಅದರ ಬ್ರೇಕ್ ಸೀಸ್ಟಮ್ ಸರಿಯಾಗಿ ಇತ್ತು. ಕೆ.ಎ.48/ಎಮ್-0521 ಓಡಿಸಿ ನೋಡಲಾಗಿ ಬ್ರೇಕ್ ಸೀಸ್ಟಮ್ ಸರಿಯಾಗಿ ಇತ್ತು ನನ್ನ ಅಭಿಪ್ರಾಯದ ಪ್ರಕಾರ ಸದರಿ ಅಪಘಾತವು ವಾಹನಗಳ ಯಾವುದೇ ತಾಂತ್ರಿಕದೋಷದಿಂದ ಆಗಿರುವುದಿಲ್ಲ ಅಂತಾ ಕಂಡು ಬಂದಿರುತ್ತದೆ. ಈ ಬಗ್ಗೆ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 15- **ಸಿ.ಡಬ್ಲ್ಯೂ.20, ಪಿ. ಡಬ್ಲ್ಯೂ. 14, ರವರು ಆದ ಬಾಸು ತಂದೆ ಚವಾಣ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ದಿಃ 07-06-2022 ರಿಂದ ದಿಃ 04-10-2023 ರವರೆಗೆ ಆಳಂದ ವೃತ್ತ ನೀರಿಕ್ಷಕರು ಅಂತಾ ಕಾರ್ಯ ನಿರ್ವಹಿಸಿರುತ್ತೇನೆ. ದಿಃ 07.06.2022 ರಂದು ಚಾಸ-19ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿ ದಿಃ 30.06.2022 ರಂದು ಅಪಘಾತಕ್ಕೆ ಇಡಾದ ವಾಹನಗಳ ಐ.ಎಮ್.ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 20.07.2022 ರಂದು ಅಪಘಾತ ಪಡಿಸಿದ ವಾಹನ ಕೆ.ಎ.48/ಎಮ್-0521 ಮಾಲೀಕರಿಂದ ಇಂಡಮನಿಟಿ ಬಾಂಡ್‌ನ್ನು ಹಾಗೂ ಭಾವಚಿತ್ರಗಳನ್ನು ಪಡೆದುಕೊಂಡು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿಃ 25.07.2022 ರಂದು ಕೆ. ಎ. 32/ಇಸಿ-4466 ವಾಹನದ ಇಂಡಮನಿಟಿ ಬಾಂಡ್‌ನ್ನು ಮತ್ತು ಆರ್.ಸಿ ಪಡೆದುಕೊಂಡು ವಾಹನದ ಭಾವಚಿತ್ರವನ್ನು ತೆಗೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ದಿಃ 08.08.2022 ರಂದು ಮೃತರ ಪಿ.ಎಮ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 16- **ಸಿ.ಡಬ್ಲೂ.2, ಪಿ. ಡಬ್ಲೂ. 15, ರವರು ಆದ ಶಂಕರ ತಂದೆ ನಿಂರಜಪ್ಪಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿಯ ಪರಿಚಯ ಇರುತ್ತದೆ, ಚಾಸ-1,3 ರಿಂದ 12 ರವರ ಪರಿಚಯ ಇರುತ್ತದೆ. ಮೃತ ಭಗವಂತರವರ ಪರಿಚಯ ಇತ್ತು. ದಿಃ 29.05.2022 ರಂದು 09.45 ರಿಂದ 10.45 ರವರೆಗೆ ಆಸ್ಪತ್ರೆಯಲ್ಲಿ ನನ್ನ ಸಮಕ್ಷಮ ಮೃತ ಭಗವಂತರವರ ದೇಹದಲ್ಲಿ ಆದ ಗಾಯಗಳನ್ನು ತೋರಿಸಿ ಪಂಚನಾಮೆ ಮಾಡಿ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಸಿ) ಅಂತಾ ಗುರುತಿಸಲಾಯಿತು. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 17 - ನೀವು ಏನನ್ನಾದರೂ ಹೇಳ ಬಯಸುವೀರಾ?
ಉತ್ತರಃ ಆರೋಪಿ. ಏನು ಇಲ್ಲ

ಪ್ರಶ್ನೆ 18- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆರೋಪಿ. ಇಲ್ಲ

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

**ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ.**